ಮಾತ್ರೆ ತೆಗೆದುಕೊಳ್ಳಲು ಆರಂಭಿಸಿದ ಸಂಗತಿಯನ್ನೂ ಕೇಳಿದವರೆ, ನನಗೆ ಕೂಡಲೇ ಆ ಮಾತ್ರೆಯನ್ನು ಬಿಟ್ಟುಬಿಡು ಎಂದು ಸಲಹೆ ಕೊಟ್ಟರು; ಮರು ಉಸುರಿನಲ್ಲಿಯೇ ಅವರ ಗ್ರಹೀತವ್ಯಕ್ತಿತ್ವಕ್ಕೆ ವಿರುದ್ಧವಾದ ಒಂದು ಪ್ರಸ್ತಾಪವನ್ನೂ ಮುಂದಿಟ್ಟರು – 'ನನಗೂ ಹಾಗೇ ಆಗುತ್ತಿತ್ತು. ಆಗ ನಾನು ಮಲಗುವ ಮೊದಲು ಇಪ್ಪತ್ತೊಂದು ಸಲ "ಓಂ ಶ್ರೀ ಮಹಾಗಣಪತಯೇ ನಮಃ" ಎಂಬ ಜಪ ಮಾಡಲಾರಂಭಿಸಿದೆ; ಅದರಿಂದ ಈಗ ನಿದ್ರೆ ಬರುತ್ತಿದೆ'. ಈ ಮಾತು ಕೇಳಿ ಗಾಬರಿಯಾಗುವ ಸರದಿ ನನ್ನ ಪಾಲಿಗೆ ಬಂದಿತ್ತು. ಅಂಥ ಅಚ್ಚರಿಯಲ್ಲಿ ನಾನು ಅವರ ಮುಖವನ್ನು ದಿಟ್ಟಿಸತೊಡಗಿದಾಗ, ಅವರೇ ಮುಂದುವರೆಸಿದರು – 'ಗಾಬರಿಯಾಗಬೇಡ. ನೀವೆಲ್ಲ ಹಿಂದೆಬಿಟ್ಟು ಆಡಿಕೊಳ್ಳುವ ಹಾಗೆ ನಾನು ವಿಚಾರವಾದಿಯೇ ಹೌದು; ಆದರೆ, ನೀವು ತಿಳಿದುಕೊಂಡಿರುವುದಕ್ಕಿಂತ ಹೆಚ್ಚು ವಿಚಾರವಾದಿ. ವಿಚಾರವಾದ ಅಂದರೆ ಏನು ಹೇಳು? ಯಾರೋ ಹೇಳಿದ್ದನ್ನು ಕೇಳದೆ ಪ್ರತ್ಯಕ್ಷಪ್ರಮಾಣವನ್ನು ಅನುಸರಿಸಿ ತಾರ್ಕಿಕವಾಗಿ ಯೋಚನೆ ಮಾಡಿ ನಿರ್ಧಾರ ಮಾಡುವುದು ಎಂದೇ ತಾನೆ? ನೋಡು, ನನ್ನ ಅನುಭವದ ಮಾತು ಹೇಳುತ್ತೇನೆ – ಈಗ ನೀನು ತಿನ್ನುತ್ತಿರುವ ಮಾತ್ರೆ ಕೆಲವು ದಿನಗಳ ನಂತರ ಕೆಲಸ ಮಾಡುವುದು ನಿಲ್ಲಿಸುತ್ತದೆ. ಆಗ ಒಂದರ ಬದಲು ಎರಡು ಮಾತ್ರೆ ತಿನ್ನುವ ಪರಿಸ್ಥಿತಿ ಬರುತ್ತದೆ. ಹಾಗಾಗಿ, ಮಾತ್ರೆಯಿಂದ ಈ ಸಮಸ್ಯೆ ಪರಿಹಾರ ಆಗುವುದಿಲ್ಲ ಎನ್ನುವುದನ್ನು ಮೊದಲು ತಾರ್ಕಿಕವಾಗಿ ಅರ್ಥ ಮಾಡಿಕೋ. ಬದಲು, ಜಪ ಮಾಡು. ಆಗ ಎರಡು ಸಾಧ್ಯತೆಗಳು ನಿನ್ನೆದುರು ತೆರೆದುಕೊಳ್ಳುತ್ತವೆ – ಒಂದು ವೇಳೆ, ನಿದ್ರೆ ಬಂದರೆ ಬಂದಷ್ಟು ದಿನ ಸಮಸ್ಯೆಯ ಪರಿಹಾರ ಆದಂತಾಯಿತು. ಒಂದು ವೇಳೆ ಬರಲಿಲ್ಲ ಅನ್ನು; ನಿನಗೆ ಮಾತ್ರೆಯಿಂದಲೂ ನಿದ್ರೆ ಬರುತ್ತಿರಲಿಲ್ಲ ಅನ್ನುವುದನ್ನು ನೆನಪು ಮಾಡಿಕೋ. ಆಗ ಕಡೆಯ ಪಕ್ಷ ಅಷ್ಟು ದಿನಗಳವರೆಗಾದರೂ ನಿನ್ನ ದೇಹವನ್ನು ಆ ಮಾತ್ರೆಯ ಅಡ್ಡಪರಿಣಾಮದಿಂದ ಕಾಪಾಡಿಕೊಂಡ ನೆಮ್ಮದಿಯಾದರೂ ಸಿಗುತ್ತದೆ!' ಅರೆ ಹೌದಲ್ಲ, ಎಂದು ನನಗನ್ನಿಸಿತ್ತು.

ಪ್ರಸ್ತುತ ಪ್ರಬಂಧವು ನಿದ್ದೆ ಬಾರದ ಸಮಸ್ಯೆ ಅಥವಾ ಅದಕ್ಕೆ ಪರಿಹಾರಗಳನ್ನು ಕುರಿತು ಅಲ್ಲವಾದ್ದರಿಂದ, ನಾನು ಮೇಲ್ಕಂಡ ವಿಚಾರವಾದಿಗಳ ಮಾತನ್ನು ಅನುಸರಿಸಿದೆನೋ ಬಿಟ್ಟೆನೋ, ಅದರಿಂದ ಪ್ರಯೋಜನವಾಯಿತೋ ಇಲ್ಲವೋ ಇತ್ಯಾದಿ ಮಾಹಿತಿಯಿಲ್ಲಿ ಮುಖ್ಯವಲ್ಲ. ಆದರೆ, ಈ ವಿಚಾರವಾದಿಗಳ ಸಲಹೆಯನ್ನು ಕುರಿತು, ಮತ್ತು ಅಂಥ ಸಲಹೆಯ ಹಿಂದಿರುವ ಮನೋಧರ್ಮವನ್ನು ಕುರಿತು ನಾನು ಹಲವು ನಿದ್ದೆ ಬಾರದ ಹೊತ್ತುಗಳಲ್ಲಿ ಚಿಂತಿಸಿದ್ದಿದೆ. ಅಂಥ ಆಲೋಚನಾಸರಣಿಯಲ್ಲಿ ನನಗನ್ನಿಸಿದ್ದು ಹೀಗೆ – ಈ ವಿಚಿತ್ರ ವಿಚಾರವಾದಿಯು ನಿಜವಾಗಿ ನಮ್ಮ ಕಾಲದೇಶಗಳಲ್ಲಿ ವಿಚಾರವಾದಿಗಳೆಂದು ಪ್ರಸಿದ್ಧರಾದ ಹಲವರಿಗಿಂತ ಹೆಚ್ಚು ವಿಚಾರವಾದಿ ಎಂಬುದಂತೂ ನಿಜವಿದ್ದೀತು. ಕಾರಣ, ನಮ್ಮ ಕಾಲದ ಪ್ರಚಲಿತ ವಿಚಾರವಾದಿಗಳ ಹಾಗೆ, ಇವರು ಯಾವತ್ತೋ ಯಾರೋ ಯೋಚನೆ ಮಾಡಿ ಸಿದ್ಧಪಡಿಸಿಟ್ಟ ವಿಚಾರವನ್ನು ಸಾಮಾನ್ಯಜ್ಞಾನವಾಗಿ ಸ್ವೀಕರಿಸಿ ನಡೆಯುವವರಲ್ಲ; ತಮಗೆ ವಿರುದ್ಧವಾಗಿ ಮಾತಾಡುವವರನ್ನು ಆಲಿಸಿ ವಿಚಾರಿಸದೆ ನಿರಾಕರಿಸುವವರೂ ಅಲ್ಲ. ಅಂದರೆ, ಇವರು ಸೈದ್ಧಾಂತಿಕವಾಗಿ ಸಾಬೀತಾದ ವಿಚಾರವನ್ನೂ ಅನುಭವಪ್ರಾಮಾಣ್ಯದಲ್ಲಿ ಒರೆ ಹಚ್ಚದೆ ಒಪ್ಪುವವರಲ್ಲ; ಸೈದ್ಧಾಂತಿಕವಾಗಿ ವಿರುದ್ಧವಾದದ್ದನ್ನೂ ಅನುಭವಪ್ರಮಾಣದಲ್ಲಿ ಪರೀಕ್ಷಿಸಲಿಕ್ಕೆ ಸಿದ್ಧವಿರುವವರು. ಮತ್ತು, ಹಾಗೆ ಪರೀಕ್ಷಿಸಲು ಹೊರಡುವಾಗಲೂ ಅದರ ತಾರ್ಕಿಕ ಪರಿಣಾಮಗಳನ್ನು ತೂಕಮಾಡಿ ಮುನ್ನಡೆಯುವವರು. ಇದನ್ನೇ ತಾತ್ವಿಕ ಪರಿಭಾಷೆಯಲ್ಲಿ ಹೇಳುವುದಾದರೆ – ಇವರು ಶಬ್ದ ಅಥವಾ ಆಪ್ತವಾಕ್ಯವೆಂಬ ಪ್ರಮಾಣಕ್ಕಿಂತಲೂ ಪ್ರತ್ಯಕ್ಷ ಪ್ರಮಾಣಕ್ಕೇ ಹೆಚ್ಚು ಆದ್ಯತೆ ಕೊಡುವವರು; ಆದ್ದರಿಂದಲೇ ಅವರು–